REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 48 । ಮಾರ್ಚ್ 9, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ಬೆಂಗಳೂರು, ತುಮಕೂರು ಮತ್ತು ಮೈಸೂರು ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ ಒಂದು ದಿನದ ವಿಚಾರ ಸಂಕಿರಣ



**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಟ್ರಸ್ಟ್ ಸಿಸ್ಟಮ್ಸ್ ಮತ್ತು ಸಾಫ್ಟ್‌ವೇರ್ ಪ್ರೈವೇಟ್ ಲಿ., ಇವರ ಸಹಯೋಗದೊಂದಿಗೆ ಬೆಂಗಳೂರು, ತುಮಕೂರು ಮತ್ತು ಮೈಸೂರು ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ ಒಂದು ದಿನದ ವಿಚಾರ ಸಂಕಿರಣವನ್ನು ಬೆಂಗಳೂರಿನ ಜಯನಗರದಲ್ಲಿರುವ "ದಿ ಹೋಟೆಲ್ ಸನ್ಮಾನ ಗಾರ್ಡೇನಿಯಾ" ಇಲ್ಲಿ ದಿನಾಂಕ : 05.03.2022ರಂದು ಆಯೋಜಿಸಿತ್ತು. ಈ ವಿಶೇಷ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ವಾಸು ಹೆಚ್., ಶ್ರೀ ರಘುನಾಥ್ ಸಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಚಂದ್ರಮೌಳಿ ಎಸ್., ಶ್ರೀ ಪಿ.ಎಲ್. ವೆಂಕಟರಾಮ ರೆಡ್ಡಿ, ಶ್ರೀ ಬಿ.ಎನ್. ಲೋಕೇಶ್ ರವರುಗಳು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ತರಬೇತಿ / ವಿಚಾರ ಸಂಕಿರಣದ ಉಪಯುಕ್ತತೆಯ ಕುರಿತು ನಿರ್ದೇಶಕರುಗಳಾದ ಶ್ರೀ ವಾಸು ಹೆಚ್., ಶ್ರೀ ರಘುನಾಥ ಸಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಚಂದ್ರಮೌಳಿ ಎಸ್., ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ, ಶ್ರೀ ಬಿ.ಎನ್. ಲೋಕೇಶ್‌ರವರುಗಳು ಮಾತನಾಡಿದರು.

ವಿಚಾರ ಸಂಕಿರಣದಲ್ಲಿ Latest RBI Initiatives for UCBs & Current Circulars ಕುರಿತು ಆರ್‌ಬಿಐನ ನಿವೃತ್ತ ಅಧಿಕಾರಿ ಶ್ರೀ ಮಹದೇವಸ್ವಾಮಿ ಉಪನ್ಯಾಸ ನೀಡಿದರು. The New trends in Banking Software for Co-operative Banks, Technology trends in cloud computing for UCBs. The RBI Compliances for Dataenter, DR Centre and Cyber security based on cloud for Co-operative Banks ವಿಷಯಗಳ ಕುರಿತು ಟ್ರಸ್ಟ್ ಸಿಸ್ಟಮ್ಸ್ ಮತ್ತು ಸಾಫ್ಟ್‌ವೇರ್ ಪ್ರೈವೇಟ್ ಲಿ., ಅಧಿಕಾರಿಗಳು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಈ ವಿಚಾರ ಸಂಕಿರಣಕ್ಕೆ ಆಗಮಿಸಿದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಮಹಾಮಂಡಳದ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎಸ್.ಎಸ್. ಬಣಕಾರ, ಅಧಿಕಾರಿ ಶ್ರೀ ಎನ್. ರಮೇಶ್ ಉಪಸ್ಥಿತರಿದ್ದರು. ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಂದ 100ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.



2 ಸೇವೆಗೆ ಮೊದಲ ಮಹಿಳಾ ಅಧ್ಯಕ್ಷೆ ಮಾಧವಿ ಪುರಿ

4 8th Batch ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ಗೆ ಅರ್ಜಿ ಆಹ್ವಾನ

7 ನಿಮ್ಮ ಪ್ರಶ್ನೆ - ನಮ್ಮ ಉತ್ತರ



## ಅತ್ಮೀಯ ಸಹಕಾರಿಗಳೇ...

# ದೇಶವಿಂದು ಆರ್ಥಿಕ ಕುಸಿತದೆಡೆಗೆ ಹೆಜ್ಜೆ ಹಾಕುತ್ತಿದೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ್ದಾರೆ. ಅವರು ರಾಜ್ಯದ ಎಲ್ಲ ಸಮಸ್ಯೆಗಳ ಆಳ ಅಗಲ ಚನ್ನಾಗಿಯೇ ಗೊತ್ತಿರುವವರು. ಸ್ವತಃ ಸಚಿವರಾಗಿ ಹಲವು ಇಲಾಖೆಗಳನ್ನು ನಿಭಾಯಿಸಿದವರು. ಈ ಹಿನ್ನೆಲೆಯಲ್ಲಿ ಅವರು ಮುಖ್ಯಮಂತ್ರಿಯಾಗಿ ಮಂಡಿಸಿದ ಚೊಚ್ಚಲ ಬಜೆಟ್ ಬಗ್ಗೆ ನನಗೆ ತುಂಬಾ ಕುತೂಹಲವಿತ್ತು. ಅಲ್ಲದೇ ತಾವು ಮಂಡಿಸುವ ಬಜೆಟ್‌ನಲ್ಲಿ ನಾಡಿನ ಮುಂದಿನ ದಿನಗಳ ಪ್ರಗತಿಯ ಭವಿಷ್ಯ ಬರೆಯುವುದಾಗಿಯೂ, ಭವಿಷ್ಯದೆಡೆಗೆ ಭರವಸೆಯ ಹೆಜ್ಜೆ ಇಡುವುದಾಗಿಯೂ ಹೇಳಿದ್ದರು. ಆದರೆ, ಮೊನ್ನೆ ಮಂಡಿಸಿರುವ ಬಜೆಟ್‌ನಲ್ಲಿ ಅದನ್ನು ಕಾರ್ಯರೂಪಕ್ಕೆ ತರುವಂತಹ ಯಾವುದೇ ಉಲ್ಲೇಖ ಹಾಗೂ ಕುರುಹೂ ನನಗೆ ಕಾಣುತ್ತಿಲ್ಲ ಎಂದು ನೋವಿನಿಂದಲೇ ಹೇಳಬೇಕಾಗಿದೆ.

ನಿಜ, ಅವರೇ ಹೇಳಿರುವ ಹಾಗೇ ರಾಜಸ್ವ ಕೊರತೆಯಿದೆ. ಈ ವರ್ಷದ ಅಂತ್ಯದೊಳಗೆ ನಮ್ಮ ಆರ್ಥಿಕ ಹೊಣೆಗಾರಿಕೆ 5 ಲಕ್ಷ ಕೋಟಿ ರೂಪಾಯಿ ಆಗುತ್ತೆ. ಪ್ರಸ್ತುತ ಸರ್ಕಾರ ಕಳೆದ ಎರಡು ವರ್ಷಗಳ ಆಡಳಿತಾವಧಿಯಲ್ಲಿ ಮಾಡಿದ ಒಟ್ಟು ಸಾಲವೇ 2 ಲಕ್ಷ 30 ಸಾವಿರ ಕೋಟಿ ರೂಪಾಯಿಗಳಾಗಿದೆ. ಆರ್ಥಿಕ ಕೊರತೆಯ ಕಾರಣಕ್ಕೆ ಪ್ರಸ್ತುತ ಸಾಲಿನಲ್ಲಿ ರೂ. 72 ಸಾವಿರ ಕೋಟಿ ಸಾಲ ಮಾಡಬೇಕಾದ ಅನಿವಾರ್ಯವಿದೆ. ರೂ. 2.65 ಲಕ್ಷ ಕೋಟಿ ಗಾತ್ರದ ಬಜೆಟ್‌ನಲ್ಲಿ ಸಾಲದ ಮೊತ್ತವೇ ರೂ. 5.32 ಲಕ್ಷ ಕೋಟಿ ದಾಟಲಿದೆ. ಅಂದರೆ, ಸರಕಾರ ಮಾಡಿದ ಸಾಲದ ತಲಾವಾರು ಋಣವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ರಾಜ್ಯದ ಪ್ರತಿಯೊಬ್ಬ ಪ್ರಜೆಯ ಮೇಲೂ ಬರೋಬ್ಬರಿ ರೂ.1,63,819 ಸಾಲದ ಹೊರೆ ಬೀಳುತ್ತದೆ.

ಇರಲಿ, ಇನ್ನೊಂದೆಡೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡಬೇಕಾದ ತೆರಿಗೆ ಪಾಲಿನ ಪ್ರಮಾಣವನ್ನು ಇಳಿಸಿರುವುದು ಮಾತ್ರವಲ್ಲ, ಅದನ್ನು ಕೊಡದೆ ಸತಾಯಿಸುತ್ತಿದೆ. ಕಾರಣ, ಕೇಂದ್ರ ಸರ್ಕಾರವೇ ಆರ್ಥಿಕ ಸಮಸ್ಯೆಗಳಲ್ಲಿ ಸಿಲುಕಿದೆ. ಕಳೆದ ಎಂಟು ವರ್ಷಗಳಲ್ಲಿ ಕೇಂದ್ರ ಮಾಡಿರುವ ಒಟ್ಟು ಸಾಲದ ಮೊತ್ತ ರೂ. 93 ಲಕ್ಷ ಕೋಟಿಯಾಗಿ ಸುಮಾರು ರೂ. 9.30 ಲಕ್ಷ ಕೋಟಿಗಳನ್ನು ಕೇವಲ ಸಾಲದ ಬಡ್ಡಿಗೇ ಪಾವತಿಸಬೇಕಿದೆ ಅಂದರೆ, ಕೇಂದ್ರದ ಆದಾಯದ ಶೇ.45ರಷ್ಟು ಪಾಲು ಕೇವಲ ಬಡ್ಡಿ ಕಟ್ಟುವುದಕ್ಕೆ ಹೋಗಲಿದೆ. ಪರಿಸ್ಥಿತಿ ಹೀಗಿರುವಾಗ ಅದು ರಾಜ್ಯಗಳಿಗೇನು ಕೊಡಲು ಸಾಧ್ಯ?

ಇದರರ್ಥ, ದೇಶವಿಂದು ಆರ್ಥಿಕ ಕುಸಿತದೆಡೆಗೆ ಹೆಜ್ಜೆ ಹಾಕುತ್ತಿದೆ ಎಂದಲ್ಲವೆ? ಪ್ರಸ್ತುತ ಬಜೆಟ್‌ನಲ್ಲಿನ ಅಂಕಿ ಅಂಶಗಳೇ ಅದರತ್ತ ಬೆರಳು ತೋರಿಸುತ್ತಿದೆಯಲ್ಲವೇ? ಅಬಕಾರಿ ಮಾರಾಟದಿಂದ ಹೆಚ್ಚು ಲಾಭ ಬರಲಿದೆ ಅನ್ನೋದು ಬಿಟ್ಟರೆ, ಬಜೆಟ್‌ನಲ್ಲಿ ಉಳಿದ ಇಲಾಖೆಗಳ ಬಗ್ಗೆ ಹೆಚ್ಚಿನ ಸ್ಪಷ್ಟನೆ ಕಾಣುತ್ತಿಲ್ಲ. ರಾಜ್ಯಕ್ಕೆ ಅಗತ್ಯವಿರುವ ಬೃಹತ್ ಯೋಜನೆ ಬಗ್ಗೆಯಾಗಲಿ, ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆಯಾಗಲಿ, ಜನಪರ ಕಾಳಜಿಯಾಗಲಿ ಕಾಣುತ್ತಿಲ್ಲ. ಅವರು ಪ್ರತಿನಿಧಿಸುವ ಹಾವೇರಿ ಜಿಲ್ಲೆಗೆ ನೀಡಿರುವ ಕೆಲ ಕೊಡುಗೆಗಳನ್ನು ಹೊರತುಪಡಿಸಿದರೆ, ಕಲ್ಯಾಣ ಕರ್ನಾಟಕ ಭಾಗಕ್ಕೂ ಯಾವುದೇ ಕೊಡುಗೆಗಳೂ ಕಾಣುತ್ತಿಲ್ಲ.

ಎಚ್.ಕೆ. ಪಾಟೀಲ
ಅಧ್ಯಕ್ಷರು

## ಸೆಬಿಗೆ ಮೊದಲ ಮಹಿಳಾ ಅಧ್ಯಕ್ಷೆ ಮಾಧವಿ ಪುರಿ



**ನವದೆಹಲಿ** : ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಮಾಧವಿ ಪುರಿ ಬುಚ್ ಅವರನ್ನು ಅಧ್ಯಕ್ಷೆಯನ್ನಾಗಿ ನೇಮಿಸಲಾಗಿದೆ. ಸೆಬಿ ಅಧ್ಯಕ್ಷ ಸ್ಥಾನಕ್ಕೆ ಆಗಿರುವ ಮೊದಲ ಮಹಿಳೆ ಮಾಧವಿ. ಅಜಯ್ ತ್ಯಾಗಿ ಅವರ ಐದು ವರ್ಷಗಳ ಅವಧಿ 28.02.2022ರ ಸೋಮವಾರ ಮುಗಿದಿದ್ದು, ಅವರ ಸ್ಥಾನಕ್ಕೆ ಈ ನೇಮಕಾತಿ ನಡೆದಿದೆ. ಸಂಪುಟದ ನೇಮಕಾತಿ ಸಮಿತಿಯು ಮೂರು ವರ್ಷಗಳ ಅವಧಿಗೆ ಅವರ ನೇಮಕಕ್ಕೆ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ. ಸೆಬಿಯ ಸದಸ್ಯರಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಈ ಹಿಂದೆ ಶಾಂಘೈನಲ್ಲಿ ನ್ಯೂ ಡೆವಲಪಮೆಂಟ್ ಬ್ಯಾಂಕ್‌ನ ಸಲಹೆಗಾರರಾಗಿ ಕೆಲಸ ಮಾಡಿದ್ದರು.

## ಜಿಡಿಪಿ ಶೇ.5.4ರಷ್ಟು ಬೆಳವಣಿಗೆ

**ನವದೆಹಲಿ** : ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇ.5.4ಕ್ಕೆ ಇಳಿಕೆ ಕಂಡಿದೆ. ಆದರೆ ಇದು, ಇದೇ ಅವಧಿಯಲ್ಲಿ ಚೀನಾ ದಾಖಲಿಸಿರುವ ಶೇ.4ರ ಬೆಳವಣಿಗೆ ದರಕ್ಕಿಂತ ಹೆಚ್ಚಿದೆ. ಶೇ.5.4ರಷ್ಟು ಬೆಳವಣಿಗೆ ಕಾಣುವ ಮೂಲಕ ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ದಾಖಲಿಸಿದ ದೇಶ ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ. ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ.8.5ರಷ್ಟು ಆಗಿತ್ತು. 2021–22ರಲ್ಲಿ ದೇಶವು ಒಟ್ಟು ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ.8.9ರಷ್ಟು ಇರಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಸೋಮವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಅಂದಾಜಿಸಿದೆ. ಜನವರಿಯಲ್ಲಿನ ವರದಿಯು ಜಿಡಿಪಿ ಬೆಳವಣಿಗೆ ಶೇ.9.2ರಷ್ಟು ಆಗಬಹುದು ಎಂದು ಅಂದಾಜು ಮಾಡಿತ್ತು. ಕೊರೊನಾ ಪೀಡಿತ 2020–21ರಲ್ಲಿ ದೇಶದ ಜಿಡಿಪಿ ಕಂಡ ಕುಸಿತವು ಶೇ.(–)6.6ರಷ್ಟು ಎಂದು ಎನ್ಎಸ್ಒ ಪರಿಷ್ಕೃತ ಲೆಕ್ಕ ನೀಡಿದೆ. ಈ ಮೊದಲು, ಕುಸಿತವು ಶೇ.(–)7.3ರಷ್ಟು ಎಂದು ಹೇಳಲಾಗಿತ್ತು.

## 2022-23ರ ರಾಜ್ಯ ಬಜೆಟ್ ಗಾತ್ರ ರೂ. 265720 ಕೋಟಿ, ಸಾಲ ರೂ. 72 ಸಾವಿರ ಕೋಟಿ; ತೆರಿಗೆ ದರದಲ್ಲಿ ಯಥಾಸ್ಥಿತಿ ಯಶಸ್ವಿನಿ ಆರೋಗ್ಯ ಯೋಜನೆ ಮರು ಜಾರಿ; ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ

**ಬೆಂಗಳೂರು :** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ್ದಾರೆ. ಒಟ್ಟು ರೂ. 2,65,721 ಕೋಟಿ. ಮೊತ್ತದ ಬಜೆಟ್ ಆಗಿದ್ದು, ಇದು ಆದಾಯಕ್ಕಿಂತಲೂ ರೂ. 5 ಸಾವಿರ ಕೋಟಿ ಹೆಚ್ಚಿನ ಬಜೆಟ್ ಮಂಡನೆಯಾಗಿದ್ದು, ರಾಜ್ಯದ ಮೇಲೆ ಒಟ್ಟು ರೂ. 72 ಸಾವಿರ ಕೋಟಿ ಸಾಲ ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಆಯವ್ಯಯದಲ್ಲಿ ತಿಳಿಸಿದ್ದಾರೆ.



ರಾಜ್ಯದ ಅಭಿವೃದ್ಧಿಗೆ ಬೊಮ್ಮಾಯಿ 6 ಅಂಶಗಳ ಸೂತ್ರ ಪರಿಚಯಿಸಿದ್ದು, ಕೃಷಿ ಮತ್ತು ಪೂರಕ ವಲಯಗಳಿಗೆ ರೂ. 33,700 ಕೋಟಿ ಮೀಸಲಿಡಲಾಗಿದ್ದು, ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗೆ ರೂ. 68,479 ಕೋಟಿ ನಿಗದಿಪಡಿಸಲಾಗಿದೆ. ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡಲಾಗಿದ್ದು, ರೂ. 55,657 ಕೋಟಿ ಮೀಸಲಿಡಲಾಗಿದೆ.

ಇನ್ನು, ಬೆಂಗಳೂರು ಸಮಗ್ರ ಅಭಿವೃದ್ಧಿಗೆ ರೂ. 8,409 ಕೋಟಿ ಮೀಸಲಿಡಲಾಗಿದೆ. ಅದಾದ ಬಳಿಕ ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ರೂ. 3,102 ಕೋಟಿ ನಿಗದಿಪಡಿಸಲಾಗಿದೆ. ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಗೆ ರೂ. 56,710 ಕೋಟಿ ಅನ್ನು ಮೀಸಲಿಡಲಾಗಿದೆ.

ಮಹಿಳೆಯರ ಸಬಲೀಕರಣ ಹಾಗೂ ಕ್ಷೇಮಾಭಿವೃದ್ಧಿಗೆ ರೂ. 43,188 ಕೋಟಿ ನಿಗದಿಪಡಿಸಿದ್ದರೆ, ಮಕ್ಕಳ ಅಭ್ಯುದಯಕ್ಕೆ ರೂ. 40,944 ಕೋಟಿ ಮೀಸಲಿಡಲಾಗಿದೆ. ಈ ವರ್ಷ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ದರ ಹೆಚ್ಚಿಸುವುದಿಲ್ಲ ಎಂದು ಹೇಳಿದ್ದಾರೆ. 2022–23ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಇಲಾಖೆಗೆ ರೂ. 77,010 ಕೋಟಿ ತೆರಿಗೆ ಸಂಗ್ರಹಣೆ ಗುರಿ ನಿಗದಿಪಡಿಸಲಾಗಿದೆ.

## ಅಸಮಾನತೆ ನಿವಾರಣೆಗೆ ಪೂರಕವಾದ ಬಜೆಟ್ : ಬಸವರಾಜ ಬೊಮ್ಮಾಯಿ

**ಬೆಂಗಳೂರು :** ಈ ಬಾರಿಯ ರಾಜ್ಯ ಬಜೆಟಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ನಿವಾರಣೆಗೆ ಪೂರಕವಾಗಿದೆ. ತಮ್ಮ ಸರ್ಕಾರ ದಿಟ್ಟ ಗುರಿಯೊಂದಿಗೆ ಎಲ್ಲರನ್ನೂ ಒಳಗೊಳ್ಳುವ ಬಜೆಟ್ ಮಂಡಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಬಜೆಟ್ ಮಂಡನೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು ಸಂಪೂರ್ಣವಾಗಿ ವಾಸ್ತವಿಕ ನೆಲೆಗಟ್ಟಿನಲ್ಲಿ ರೂಪಿಸಿದ ಬಜೆಟ್. ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ ಶೇ 3.5ರಷ್ಟು ಸಾಲ ಪಡೆಯುವ ಅವಕಾಶ ಇತ್ತು. ಆದರೆ, ವಿತ್ತೀಯ ಶಿಸ್ತು ಕಾಪಾಡುವ ಉದ್ದೇಶದಿಂದ ಶೇ 3.26ರಷ್ಟು ಸಾಲವನ್ನು ಮಾತ್ರ ಪಡೆಯುವ ತೀರ್ಮಾನ ಮಾಡಲಾಗಿದೆ. ರಾಜಸ್ವ ಕೊರತೆಯನ್ನೂ ಕಡಿಮೆ ಮಾಡಲಾಗಿದೆ' ಎಂದರು.

ಇದೇ ಮೊದಲ ಬಾರಿಗೆ ನೈಸರ್ಗಿಕ ಅಸಮತೋಲನ ನಿವಾರಣೆಗೆ ಪೂರಕವಾಗಿ 'ಪರಿಸರ ಬಜೆಟ್' ರೂಪಿಸಲಾಗಿದೆ. ಇದು ತಮ್ಮ ಸರ್ಕಾರ ಹೊಂದಿರುವ ಸೂಕ್ಷ್ಮತೆಗೆ ಸಾಕ್ಷಿ. ಹೆಚ್ಚು ಜನರನ್ನು ತಲುಪುವಂತಹ ಆರೋಗ್ಯ ಸೇವೆಗಳಿಗೂ ಪ್ರಾಧಾನ್ಯತೆ ನೀಡಲಾಗಿದೆ ಎಂದು ಹೇಳಿದರು.

**ರೈತರಿಗಾಗಿ ಮತ್ತೆ 'ಯಶಸ್ವಿನಿ' ಜಾರಿ :** ರೈತರ ಬಹು ದಿನಗಳ ಬೇಡಿಕೆಯಾದ 'ಯಶಸ್ವಿನಿ' ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಈ ಯೋಜನೆಯಿಂದ ರೈತ ಕುಟುಂಬಗಳಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳು ಲಭಿಸಲಿದೆ. ಈ ಉದ್ದೇಶಕ್ಕಾಗಿ ರೂ. 300 ಕೋಟಿ ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

**ತಾಳೆಗೆ ಪ್ರೋತ್ಸಾಹ :** 'ರಾಷ್ಟ್ರೀಯ ಖಾದ್ಯ ತೈಲಗಳು, ತಾಳೆ ಎಣ್ಣೆ ಅಭಿಯಾನ'ದಡಿ ತಾಳೆ ಬೆಳೆಯುವ ಪ್ರದೇಶದ ವ್ಯಾಪ್ತಿಯನ್ನು ಐದು ವರ್ಷಗಳಲ್ಲಿ 25 ಸಾವಿರ ಹೆಕ್ಟೇರ್‌ಗಳಷ್ಟು ಹೆಚ್ಚಿಸುವ ಗುರಿ ಇದ್ದು, ಇದಕ್ಕಾಗಿ ರೂ. 35 ಕೋಟಿ ಅನುದಾನ ನಿಗದಿ ಮಾಡಲಾಗಿದೆ.

# 8th Batch ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ.

ಈಗಾಗಲೇ 6 ಬ್ಯಾಚ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 7ನೇ ಬ್ಯಾಚ್‌ನ ಪರೀಕ್ಷೆಗಳು ಸದ್ಯದಲ್ಲಿಯೇ ಜರುಗಲಿವೆ. ಈಗ 8ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮಹಾಮಂಡಳವು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸಂಪರ್ಕ ತರಗತಿಗಳನ್ನು ಮತ್ತು ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಪ್ರಯುಕ್ತ, ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು ಸದರಿ ಕೋರ್ಸ್‌ಗೆ ನೋಂದಣಿ ಮಾಡಿಸುವಾಗ ಯಾವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದೀರೆಂದು ಕಡ್ಡಾಯವಾಗಿ ನೋಂದಣಿ ಅರ್ಜಿಯಲ್ಲಿ ತಿಳಿಸಬೇಕು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನುಕೂಲವಾಗುತ್ತದೆ.

ಅರ್ಜಿಯನ್ನು ಭರ್ತಿ ಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಲು ಕೊನೆಯ ದಿನಾಂಕ : 25.03.2022 ಆಗಿರುತ್ತದೆ. ಆದ್ದರಿಂದ ಕೊನೆಯ ದಿನದವರೆಗೆ ಕಾಯದೆ ಬೇಗನೆ ಅರ್ಜಿಗಳನ್ನು ಭರ್ತಿಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಬೇಕು. ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.4,500 + (ಜಿಎಸ್‌ಟಿ) 810 = ಒಟ್ಟು ರೂ. 5,310/–ಗಳನ್ನು ನಿಗದಿಪಡಿಸಲಾಗಿದೆ.

ಈಗಾಗಲೇ ತಮ್ಮ ಬ್ಯಾಂಕಿನ ಇ–ಮೇಲ್ ವಿಳಾಸಕ್ಕೆ ಕೋರ್ಸ್‌ಗೆ ಸಂಬಂಧಿಸಿದ ಅರ್ಜಿ ಫಾರಂ ಮತ್ತು ವಿವರಗಳನ್ನು ಕಳುಹಿಸಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಶ್ರೀನಿವಾಸ್ ಹೆಚ್.ಸಿ. (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.



## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಶ್ರೀಮತಿ ಹೆಚ್. ಪಾರ್ವತಿ ಅವಿರೋಧ ಆಯ್ಕೆ

**ಬೆಂಗಳೂರು** : ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ 2018–19 ರಿಂದ 2022–23ನೇ ಸಾಲಿನ ನಿರ್ದೇಶಕ ಮಂಡಳಿಯ ಉಳಿದ ಅವಧಿಗೆ ದಿನಾಂಕ : 28.02.2022 ರಂದು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬ್ಯಾಂಕಿನ ಮಹಿಳಾ ನಿರ್ದೇಶಕರಾದ ಶ್ರೀಮತಿ ಹೆಚ್. ಪಾರ್ವತಿ (ರಂಗನಾಯಕಿ) ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಶ್ರೀ ಬನಶಂಕರಿ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ : ಉಚಿತ ವೈದ್ಯಕೀಯ ತಪಾಸಣಾ ಶಿಬಿರ





**ಬೆಂಗಳೂರು** : ದಿನಾಂಕ : 27.02.2022ರಂದು ಶ್ರೀ ಬನಶಂಕರಿ ಮಹಿಳಾ ಕೋ–ಆಪರೇಟಿವ್ ಬ್ಯಾಂಕಿನ ವತಿಯಿಂದ ಬ್ಯಾಂಕಿನ ಸದಸ್ಯೆಯರು, ಗ್ರಾಹಕರು ಹಾಗೂ ಸುತ್ತಮುತ್ತಲಿನ ನಾಗರೀಕರಿಗೆಂದು ಕ್ಯಾನ್ಸರ್ ರೋಗ ಪತ್ತೆ ಹಾಗೂ ಹೃದಯ ಸಂಬಂಧಿತ ಕಾಯಿಲೆಗಳ ವೈದ್ಯಕೀಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಕರ್ನಾಟಕ ಕ್ಯಾನ್ಸರ್ ಸೊಸೈಟಿ, ಭಾರತೀಯ ಆಯುರ್ವೇದ ಪ್ರತಿಷ್ಠಾನ ಮತ್ತು ಸ್ವಸ್ಥ ಸಮೃದ್ಧ ಭಾರತ ಹಾಗೂ ತ್ರಿಶೂಲ್ ಟ್ರಸ್ಟ್, ಈ ಸಂಸ್ಥೆಗಳು ಬ್ಯಾಂಕಿನ ಜೊತೆ ಕೈ ಜೋಡಿಸಿದ್ದು. ಈ ಶಿಬಿರದಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್, ಮಧುಮೇಹ ತಪಾಸಣೆ, ಇಸಿಜಿ, ರಕ್ತದೊತ್ತಡ ಹಾಗೂ ದಂತ ತಪಾಸಣೆಗಳನ್ನು ನಡೆಸಲಾಯಿತು. ಸುಮಾರು 85ಕ್ಕೂ ಹೆಚ್ಚು ಜನರು ಈ ವೈದ್ಯಕೀಯ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.

## ಹೊನ್ನಾವರ ಅರ್ಬನ್ ಬ್ಯಾಂಕಿನಿಂದ ಪ್ರತಿಭಾ ಪುರಸ್ಕಾರ

**ಹೊನ್ನಾವರ :** ಹೊನ್ನಾವರ ಅರ್ಬನ್ ಬ್ಯಾಂಕಿನ 2021–2022ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ದಿನಾಂಕ 27–02–2022ರಂದು ಬ್ಯಾಂಕಿನ ಮೇಲ್ಮಹಡಿಯಲ್ಲಿನ ಎಂ.ಪಿ. ಕಿಣಿ ಮತ್ತು ಎಲ್.ಕೆ. ಶ್ಯಾನಭಾಗ ಶ್ರೋಫ್ ಹಾಲ್‌ನಲ್ಲಿ ನಡೆಯಿತು. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀಮತಿ ಅರ್ಚನಾ ಯು. ಪ್ರಿನ್ಸಿಪಾಲ್, ಸಿದ್ಧಾರ್ಥ ಪಿ.ಯು ಕಾಲೇಜು, ಭಟ್ಕಳ ಇವರು ಆಗಮಿಸಿದ್ದರು.

ಅತಿಥಿಗಳು ಬ್ಯಾಂಕಿನ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಗುರಿ ಇಟ್ಟುಕೊಳ್ಳಿ. ಹೊರಗಡೆ ಹೋಗಿ ಕಲಿತರೂ ನಿಮ್ಮ ಊರಿಗೆ ಸೇವೆಯನ್ನು ನೀಡಿ. ಓದುವ ಹವ್ಯಾಸ ಬೆಳೆಸಿಕೊಳ್ಳಿ. ಕಲಿಯಿರಿ ಮತ್ತು ಮನನ ಮಾಡಿಕೊಳ್ಳಿ ಅದು ಶಾಶ್ವತವಾಗಿರುತ್ತದೆ ಎಂದರು. ಈ ವಯಸ್ಸು ಕಲಿಯುವಿಕೆಗೆ ಇರುವುದು. ಹಿರಿಯರೊಂದಿಗೆ ಬೆರೆಯಿರಿ. ಎಲ್ಲರಿಗೂ ಇರುವ ಸಮಯ ಒಂದೇ. ಆದರೆ ಅದನ್ನು ಹೇಗೆ ನಾವು ಸದುಪಯೋಗ ಮಾಡಿಕೊಳ್ಳುತ್ತೇವೆ ಎಂಬುದು ಮಹತ್ವದ್ದು ಎಂದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡ ಹೊನ್ನಾವರ ಅರ್ಬನ್ ಬ್ಯಾಂಕನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಸ್ಥಾನ ಪಡೆದ ನಾಲ್ವರನ್ನು, ತಾಲೂಕಿನಲ್ಲಿ ಮೊದಲ 3 ಸ್ಥಾನ ಪಡೆದ ನಾಲ್ಕು ವಿದ್ಯಾರ್ಥಿಗಳ ಸಹಿತ ಪಿ.ಯು, ಪದವಿ ಹಾಗೂ ಸ್ನಾತಕೋತ್ತರ ವರ್ಗಗಳಲ್ಲಿ ಪ್ರಥಮ ಬಂದವರನ್ನು, ಕ್ರೀಡೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದವರನ್ನು, ವಿಶಿಷ್ಟ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಹಾಗೂ ಬ್ಯಾಂಕ್ ಸಿಬ್ಬಂದಿಗಳ ಮಕ್ಕಳಿಗೆ ನಗದು ನೀಡಿ ಪ್ರೋತ್ಸಾಹಿಸಲಾಯಿತು. ಹೀಗೆ ಒಟ್ಟು 24 ಪ್ರತಿಭಾವಂತರಿಗೆ / ಪ್ರತಿಭಾನ್ವಿತರಿಗೆ ಬ್ಯಾಂಕಿನ ವತಿಯಿಂದ ಒಟ್ಟು 75,500/–ರೂ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಹೊನ್ನಾವರ ರೈಲ್ವೆ ಸ್ಟೇಷನ್‌ಗೆ ಪ್ರಯಾಣಿಕರ ಅನುಕೂಲದ ಬಗ್ಗೆ Wheel chair ಒಂದನ್ನು ಬ್ಯಾಂಕಿನಿಂದ ನೀಡಲಾಯಿತು.



ಬ್ಯಾಂಕಿನ ಅಧ್ಯಕ್ಷ ಶ್ರೀ ರಾಘವ ವಿಷ್ಣು ಬಾಳೇರಿಯವರು ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ಎಲ್. ಎಮ್ ಹೆಗಡೆ, ಮುಖ್ಯಾಧ್ಯಾಪಕರು ಶ್ರೀ ಚೆನ್ನಕೇಶವ ಪ್ರೌಢಶಾಲೆ, ಕರ್ಕಿ ಇವರು ಅಭಿನಂದನಾ ಭಾಷಣ ಮಾಡಿದರು.

ಕಾರ್ಯಕ್ರಮದ ಮೊದಲು ಶ್ರೀ ವಿನಯಕಿರಣ ಪ್ರಭು ಮತ್ತು ಸಂಗಡಿಗರ ಸಂಗೀತ ಕಾರ್ಯಕ್ರಮವು ಹಾಗೂ ಶ್ರೀಮತಿ ಮಂಜರಿ ಮೋಹನ ಭಟ್ಟ ಮತ್ತು ಕುಮಾರಿ ಪೂಜಾ ಸುಭೋದ ಅರವಾರೆ ಇವರ ಪ್ರಾರ್ಥನೆ ಎಲ್ಲ ಸಭಿಕರನ್ನು ಮನೋಲ್ಲಾಸಗೊಳಿಸಿತು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಸಂತ ವೆಂಕಟೇಶ ಪ್ರಭುರವರು ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಧನಂಜಯ ಪೈ ಹಾಗೂ ಶ್ರೀಮತಿ ಮಂಜರಿ ಭಟ್ಟ ಕಾರ್ಯಕ್ರಮ ನಿರ್ವಹಿಸಿದರು. ಪ್ರಧಾನ ವ್ಯವಸ್ಥಾಪಕ ಶ್ರೀ ರಾಜೀವ ಶ್ಯಾನಭಾಗ ಆಭಾರ ಮನ್ನಿಸಿದರು.

## ಉಕ್ರೇನ್ ಯುದ್ಧ ಎಸ್‌ಬಿಐನಿಂದ ರಷ್ಯಾ ಸಂಸ್ಥೆಗಳ ವಹಿವಾಟುಗಳು ಸ್ಥಗಿತ

**ನವದೆಹಲಿ :** ಉಕ್ರೇನ್ ಮೇಲೆ ಯುದ್ಧ ಘೋಷಣೆ ಮಾಡಿರುವ ರಷ್ಯಾದ ಸಂಸ್ಥೆಗಳ ವಹಿವಾಟುಗಳ ಪ್ರಕ್ರಿಯೆಗಳನ್ನು ದೇಶದ ಅತಿ ದೊಡ್ಡ ಬ್ಯಾಂಕ್ ಎಸ್‌ಬಿಐ ಸ್ಥಗಿತಗೊಳಿಸಿದೆ.

ಯುದ್ಧ ಘೋಷಿಸಿರುವ ರಷ್ಯಾ ವಿರುದ್ಧ ಪಶ್ಚಿಮದ ಹಲವು ದೇಶಗಳು ನಿರ್ಬಂಧಗಳನ್ನು ವಿಧಿಸಿದ್ದು, ನಿರ್ಬಂಧ ಎದುರಿಸುತ್ತಿರುವ ಸಂಸ್ಥೆಗಳ ವಹಿವಾಟು ಪ್ರಕ್ರಿಯೆಗಳನ್ನು ಎಸ್‌ಬಿಐ ನಿಲ್ಲಿಸಿದೆ.

ನಿರ್ಬಂಧಗಳನ್ನು ಎದುರಿಸುತ್ತಿರುವ ಸಂಸ್ಥೆಗಳ ಅಥವಾ ಕ್ಷೇತ್ರಗಳೊಂದಿಗೆ ಯಾವುದೇ ವಹಿವಾಟು ನಡೆಸಿದರೂ ತನಗೂ ಆ ನಿರ್ಬಂಧಗಳು ಅನ್ವಯಿಸುತ್ತದೆ ಎಂಬ ಆತಂಕ ಎಸ್‌ಬಿಐ ನದ್ದಾಗಿದ್ದು, ತನ್ನ ನಿರ್ಧಾರದ ಬಗ್ಗೆ ಸುತ್ತೋಲೆ ಹೊರಡಿಸಿದೆ. ಅಮೆರಿಕ, ಯುರೋಪಿಯನ್ ಒಕ್ಕೂಟಗಳ ನಿರ್ಬಂಧಗಳ ಪಟ್ಟಿಯಲ್ಲಿರುವ ಬ್ಯಾಂಕ್, ಬಂದರು ಅಥವಾ ಹಡಗುಗಳಿಗೆ ಸಂಬಂಧಿಸಿದಂತೆ ಯಾವುದೆ ವಹಿವಾಟುಗಳ ಪ್ರಕ್ರಿಯೆಗಳನ್ನು ತಡೆಹಿಡಿಯಲಾಗಿದೆ. ಈ ಸಂಸ್ಥೆಗಳ ಪಾವತಿಗಳನ್ನು ಬ್ಯಾಂಕಿಂಗ್ ಹೊರತಾದ ಬೇರೆ ಮಾರ್ಗದ ಮೂಲಕ ಮಾಡಿಕೊಳ್ಳಬೇಕಾಗಿದೆ ಎಂದು ಬ್ಯಾಂಕ್ ಮೂಲಗಳು ತಿಳಿಸಿವೆ.




ರಷ್ಯಾದಲ್ಲಿ ಎಸ್‌ಬಿಐ ಕಮರ್ಷಿಯಲ್ ಇಂಡೋ ಬ್ಯಾಂಕ್ ಎಂಬ ಸಂಸ್ಥೆಯ ಸಹಯೋಗದಲ್ಲಿದ್ದು ಶೇ.40 ರಷ್ಟು ಪಾಲುದಾರಿಕೆಯನ್ನು ಹೊಂದಿರುವ ಕೆನರಾ ಬ್ಯಾಂಕ್ ಸಹಭಾಗಿತ್ವದ ಮತ್ತೊಂದು ಸಂಸ್ಥೆಯಾಗಿದೆ.

# ಮಾರ್ಚ್ 31ರ ಒಳಗಾಗಿ ಆಧಾರ್ ಮತ್ತು ಪ್ಯಾನ್ ಲಿಂಕ್ ಮಾಡಲೇಬೇಕು

ಭಾಸ್ಕರ್ ಎನ್.ಜಿ.

ಭಾರತದಲ್ಲಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ಎಲ್ಲರಿಗೂ ಆಧಾರ್ ಕಾರ್ಡ್‌ನೊಂದಿಗೆ ಪ್ಯಾನ್ (ಶಾಶ್ವತ ಖಾತೆ ಸಂಖ್ಯೆ) ಕಾರ್ಡ್ ಅನ್ನು ಲಿಂಕ್ ಮಾಡುವುದನ್ನು ಭಾರತ ಸರ್ಕಾರವು ಈಗ ಕಡ್ಡಾಯಗೊಳಿಸಿದೆ. ಈ ವರ್ಷದ ಮಾರ್ಚ್ 31ರ ಒಳಗಾಗಿ ನೀವು ಈ ಎರಡು ಪ್ರಮುಖ ದಾಖಲೆಗಳನ್ನು ಲಿಂಕ್ ಮಾಡಲು ಅವಕಾಶ ನೀಡಲಾಗಿದ್ದು, ಈ ಸಮಯದ ಒಳಗಾಗಿ ನೀವು ಈ ಕೆಲಸವನ್ನು ಮಾಡದಿದ್ದರೆ, ನಿಮ್ಮ ಪ್ಯಾನ್ ಕಾರ್ಡ್ ಅಮಾನ್ಯವಾಗುತ್ತದೆ ಮತ್ತು ನೀವು 1,000 ರೂ. ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂದು ತಿಳಿಸಿದೆ. ಪ್ಯಾನ್ ಕಾರ್ಡ್ ಅಮಾನ್ಯವಾಗದಂತೆ ಮತ್ತು 1,000 ದಂಡದ ಅಪಾಯವನ್ನು ತಪ್ಪಿಸಲು ನೀವು ನಿಮ್ಮ ಆಧಾರ್ ಕಾರ್ಡ್‌ನೊಂದಿಗೆ ಪ್ಯಾನ್ ಅನ್ನು ಲಿಂಕ್ ಮಾಡುವುದು ಹೇಗೆ ಎಂಬುದನ್ನು ತಿಳಿಯೋಣ ಬನ್ನಿ.




**ನಿಮ್ಮ ಪ್ಯಾನ್ ಅನ್ನು ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಮಾಡುವುದು ಹೇಗೆ?**

- ಆದಾಯ ತೆರಿಗೆ ಇ-ಫೈಲಿಂಗ್ ಪೋರ್ಟಲ್ "www.incometaxindiaefiling.gov.in/"ಗೆ ಭೇಟಿ ನೀಡಿ.
- ವೆಬ್‌ಸೈಟ್‌ನಲ್ಲಿ ನಿಮ್ಮನ್ನು ನೋಂದಾಯಿಸಿಕೊಳ್ಳಿ, ಇದಕ್ಕಾಗಿ ನಿಮ್ಮ ಪಾನ್ ಕಾರ್ಡ್ ಸಂಖ್ಯೆಯನ್ನು ನಮೂದಿಸಿ, ಅದು ನಿಮ್ಮ ಬಳಕೆದಾರ ID ಆಗಿರುತ್ತದೆ.
- ನಿಮ್ಮ ಬಳಕೆದಾರ ID, ಪಾಸ್‌ವರ್ಡ್ ಮತ್ತು ಜನ್ಮ ದಿನಾಂಕವನ್ನು ನಮೂದಿಸುವ ಮೂಲಕ ಲಾಗ್ ಇನ್ ಮಾಡಿ. ನೀವು ಖಾತೆಯನ್ನು ಹೊಂದಿಲ್ಲದಿದ್ದರೆ, ನೀವು ಒಂದನ್ನು ರಚಿಸಬೇಕಾಗುತ್ತದೆ.
- ನಿಮ್ಮ ಪ್ಯಾನ್ ಅನ್ನು ಆಧಾರ್‌ನೊಂದಿಗೆ ಲಿಂಕ್ ಮಾಡಲು ಕೇಳುವ ಪಾಪ್-ಅಪ್ ವಿಂಡೋ ಕಾಣಿಸಿಕೊಳ್ಳುತ್ತದೆ.
- ನೀವು ಯಾವುದೇ ಪಾಪ್-ಅಪ್ ಕಾಣದಿದ್ದರೆ, ಮೆನು ಬಾರ್‌ನಲ್ಲಿ "ಪ್ರೊಫೈಲ್ ಸೆಟ್ಟಿಂಗ್‌ಗಳು"ಗೆ ಹೋಗಿ ಮತ್ತು ಲಿಂಕ್ ಆಧಾರ್ ಕ್ಲಿಕ್ ಮಾಡಿ.
- ನಿಮ್ಮ ಪ್ಯಾನ್ ವಿವರಗಳ ಪ್ರಕಾರ ಹೆಸರು, ಹುಟ್ಟಿದ ದಿನಾಂಕ ಮತ್ತು ಲಿಂಗದಂತಹ ವಿವರಗಳನ್ನು ಈಗಾಗಲೇ ಉಲ್ಲೇಖಿಸಲಾಗುತ್ತದೆ.
- ಈಗ, ನಿಮ್ಮ ಆಧಾರ್‌ನಲ್ಲಿ ನಮೂದಿಸಲಾದ ಪ್ಯಾನ್ ವಿವರಗಳನ್ನು ನೀವು ಪರದೆಯ ಮೇಲೆ ಪರಿಶೀಲಿಸಬೇಕಾಗುತ್ತದೆ.
- ಹೊಂದಾಣಿಕೆಯಾಗದಿದ್ದಲ್ಲಿ, ನೀವು ಯಾವುದೇ ದಾಖಲೆಗಳಲ್ಲಿ ಅದೇ ಸರಿಪಡಿಸುವಿಕೆಯನ್ನು ಪಡೆಯಬೇಕು ಎಂಬುದನ್ನು ಗಮನಿಸಿ.
- ವಿವರಗಳು ಹೊಂದಾಣಿಕೆಯಾದರೆ, ನಿಮ್ಮ ಆಧಾರ್ ಸಂಖ್ಯೆಯನ್ನು ನಮೂದಿಸಿ ಮತ್ತು "ಈಗ ಲಿಂಕ್" ಬಟನ್ ಕ್ಲಿಕ್ ಮಾಡಿ.
- ನಿಮ್ಮ ಆಧಾರ್ ಅನ್ನು ನಿಮ್ಮ ಪ್ಯಾನ್‌ಗೆ ಯಶಸ್ವಿಯಾಗಿ ಲಿಂಕ್ ಮಾಡಲಾಗಿದೆ ಎಂದು ಪಾಪ್-ಅಪ್ ಸಂದೇಶವು ನಿಮಗೆ ತಿಳಿಸುತ್ತದೆ.
- ನಿಮ್ಮ ಪ್ಯಾನ್ ಅನ್ನು ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಮಾಡಲು ನೀವು www.utiitsl.com/ ಅಥವಾ www.egov-nsdl.co.in/ ಗೆ ಭೇಟಿ ನೀಡಬಹುದು.

## ಪ್ಯಾನ್, ಆಧಾರ್ ವಿವರ : ಸಿಬಿಐಸಿ ಎಚ್ಚರಿಕೆ

**ನವದೆಹಲಿ:** ಸಕಾರಣ ಇಲ್ಲದೆಯೆ, ಹಣಕಾಸಿನ ಲಾಭ ಗಮನದಲ್ಲಿ ಇರಿಸಿಕೊಂಡು ಪ್ಯಾನ್ ಹಾಗೂ ಆಧಾರ್ ಸಂಖ್ಯೆ ಹಂಚಿಕೊಳ್ಳುವುದು ಸರಿಯಲ್ಲ ಎಂದು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಐಸಿ) ಗುರುವಾರ ಎಚ್ಚರಿಕೆ ನೀಡಿದೆ. ಹೀಗೆ ಪ್ಯಾನ್ ಮತ್ತು ಆಧಾರ್ ಸಂಖ್ಯೆಯನ್ನು ಪಡೆದು, ಅವುಗಳನ್ನು ಜಿಎಸ್‌ಟಿ ವಂಚಿಸಲು ಬಳಸಿಕೊಳ್ಳಬಹುದು ಎಂದು ಸಿಬಿಐಸಿ ಕಿವಿಮಾತು ಹೇಳಿದೆ.

ಆಧಾರ್ ಮತ್ತು ಪ್ಯಾನ್ ವಿವರ ಬಳಸಿ ನಕಲಿ ಕಂಪನಿ ರಚಿಸಬಹುದು, ಆ ಮೂಲಕ ಜಿಎಸ್‌ಟಿ ವಂಚನೆ ಎಸಗಬಹುದು. ಹೀಗಾಗಿ, ನಿರ್ದಿಷ್ಟ ಕಾರಣ ಇಲ್ಲದಿದ್ದರೆ ಈ ವಿವರಗಳನ್ನು ಜನ ಬೇರೆಯವರ ಜೊತೆ ಹಂಚಿಕೊಳ್ಳಬಾರದು ಎಂದು ಸಿಬಿಐಸಿ ಹೇಳಿದೆ.



# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.




**ಬ್ಯಾಂಕಿನಿಂದ ಸ್ಥಿರಾಸ್ತಿಗಳ ಆಧಾರದ ಮೇಲೆ ಪಡೆದ ಸಾಲಗಳು ಮುದ್ದತ ಮೀರಿ ಅಮಲಬಜಾವಣೆ ಪ್ರಕರಣದಲ್ಲಿದ್ದು, ಸದರಿ ಸ್ಥಿರಾಸ್ತಿಗಳನ್ನು ಬಹಿರಂಗ ಲಿಲಾವಿನಲ್ಲಿ ಮೂರು ಸಾರೆ ಮಾರಾಟಕ್ಕೆ ತೆಗೆಯಲಾಗಿ ಯಾರು ಬಿಡ್‌ನಲ್ಲಿ ಭಾಗವಹಿಸದ ಕಾರಣ ಅಥವಾ ಸರಿಯಾದ ಮಾರುಕಟ್ಟೆ ಬೆಲೆಗೆ ಬಿಡ್ ಕೇಳದ ಕಾರಣದಿಂದ ಸದರಿ ಸ್ವತ್ತುಗಳು ಮಾರಾಟವಾಗುವುದಿಲ್ಲ. ಇಂಥಾ ಪ್ರಸಂಗಗಳಲ್ಲಿ ಮಾರಾಟ ಮಾಡಲಾಗದ ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಬಹುದೇ? ಒಂದು ವೇಳೆ ವರ್ಗಾವಣೆ ಮಾಡಿಕೊಳ್ಳುವುದಾದಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ತಮ್ಮ ಸೂಕ್ತ ಅಭಿಪ್ರಾಯ / ಕಾನೂನು ಸಲಹೆಯನ್ನು ಕೇಳಲಾಗಿದೆ. ಬ್ಯಾಂಕಿನಲ್ಲಿ ಇಂಥಾ ಪ್ರಕರಣಗಳು ಸಾಕಷ್ಟು ಇದ್ದು, ಎನ್‌ಪಿಎ ಪ್ರಮಾಣ ಹೇರಳವಾಗಿದೆ. ಕಾರಣ ತೀವ್ರ ಕಾನೂನು ಸಲಹೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.**

**– ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು.**

**01. ಎಷ್ಟು ಸಾರೆ ಸ್ವತ್ತನ್ನು ಬಹಿರಂಗ ಲಿಲಾವಿಗೆ ತೆಗೆಯಬೇಕು ಮತ್ತು ಯಾವ ಸಂದರ್ಭದಲ್ಲಿ ಮಾರಾಟವಾಗದ ಸ್ವತ್ತನ್ನು ಬ್ಯಾಂಕಿಗೆ ವರ್ಗಾವಣೆ ಮಾಡಿಕೊಳ್ಳಬೇಕು?**

**ಉತ್ತರ :** ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 101ರ ಅಡಿಯಲ್ಲಿ ಅಡಮಾನಗೊಳಿಸಿದ ಮಾರಾಟ ಮಾಡಲಾಗದ ಸ್ವತ್ತನ್ನು ಖರೀದಿದಾರರ ಕೊರತೆಯಿಂದಾಗಿ ಮಾರಾಟ ಮಾಡಲು ಸಾಧ್ಯವಾಗದಿದ್ದರೆ, ಆ ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ವರ್ಗಾವಣೆ ಮಾಡಬಹುದು. ಬ್ಯಾಂಕಿನ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಸಂಬಂಧಿಸಿದ ನಿಬಂಧನೆಗಳು ಕಾಯ್ದೆ ಕಲಂ 101–ಬಿ ಮತ್ತು ನಿಯಮ 38–ಎ ಯಲ್ಲಿ ಒಳಗೊಂಡಿದೆ. ಸ್ವತ್ತನ್ನು ಬ್ಯಾಂಕಿಗೆ ವರ್ಗಾವಣೆ ಮಾಡುವ ಮುನ್ನ ಎಷ್ಟು ಸಾರಿ ಸ್ವತ್ತನ್ನು ಬಹಿರಂಗ ಲಿಲಾವಿಗೆ ತೆಗೆಯಬೇಕು ಎಂಬುದರ ಬಗ್ಗೆ ಈ ನಿಬಂಧನೆಗಳಲ್ಲಿ ತಿಳಿಸಿಲ್ಲ. ಮೂರು ವಿಫಲ ಬಹಿರಂಗ ಲಿಲಾವಿನ ಪ್ರಯತ್ನದ ನಂತರ ಆಸ್ತಿಯ ವರ್ಗಾವಣೆಗೆ ಬ್ಯಾಂಕುಗಳು ಅರ್ಜಿ ಸಲ್ಲಿಸುವುದು ಸಾಮಾನ್ಯ ಅಭ್ಯಾಸವಾಗಿದೆ. ಸರ್ಫೇಸಿ (SARFAESI Act) ಕಾಯ್ದೆಯಡಿಯಲ್ಲಿ ಬ್ಯಾಂಕು ಕ್ರಮಕೈಗೊಂಡಿದ್ದರೆ, ಕರ್ನಾಟಕ ಸಹಕಾರ ಸಂಘಗಳ ನಿಯಮ 38–ಎ(2) ಅಂತರ್ಗತ ಸಂಬಂಧಿತರಿಗೆ ವರ್ಗಾವಣೆಗಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಸ್ವತ್ತನ್ನು ವಶಕ್ಕೆ ತೆಗೆದುಕೊಂಡು ಮೂರು ಬಹಿರಂಗ ಲಿಲಾವಿನ ನಂತರವೂ ಸ್ವತ್ತು ಮಾರಾಟವಾಗದಿದ್ದರೆ ಸರ್ಫೇಸಿ ಕಾಯ್ದೆ (SARFAESI Act)ಯ ಕಲಂ 13 (4) (a)(b) ರೀತ್ಯಾ ಸ್ವತ್ತನ್ನು ನೇರವಾಗಿ ಬ್ಯಾಂಕಿನ ಹೆಸರಿಗೆ ವರ್ಗಾವಣೆ ಮಾಡಬಹುದು.

**02. ಮಾರಾಟವಾಗದ ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ವರ್ಗಾವಣೆ ಮಾಡಿಕೊಂಡಲ್ಲಿ ಸದರಿ ಸ್ಥಿರಾಸ್ತಿಯ ಮಾರುಕಟ್ಟೆಯ ಬೆಲೆಯ ಮೊತ್ತವನ್ನು ಸಾಲ ಖಾತೆಗೆ ಜಮಾ ತೆಗೆದುಕೊಂಡು ಎನ್‌ಪಿಎ ಪ್ರಮಾಣ ಕಡಿಮೆಗೊಳಿಸಬಹುದೇ?**

**ಉತ್ತರ :** ಬ್ಯಾಂಕಿನ ಹೆಸರಿನಲ್ಲಿ ನೋಂದಾಯಿಸಲಾದ ಆಸ್ತಿಯ ಮಾರುಕಟ್ಟೆ ಬೆಲೆಯ ಮೊತ್ತವನ್ನು ಸುಸ್ತಿ ಸಾಲದ ಖಾತೆಗೆ ಜಮಾ ಮಾಡಬಹುದು.

**03. ಮಾರಾಟವಾಗದ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ವರ್ಗಾಯಿಸಿಕೊಂಡಲ್ಲಿ ಆ ದಿನದಿಂದ ಸಾಲದ ಬಡ್ಡಿಯ ಆಕರಣೆ ನಿಲ್ಲುತ್ತದೆ ಹೇಗೆ?**

**ಉತ್ತರ :** ಸ್ವತ್ತಿನ ಮಾರುಕಟ್ಟೆ ಬೆಲೆಯ ಮೌಲ್ಯವು ಬಾಕಿಯಿರುವ ಸಾಲದ ಅಸಲು ಮತ್ತು ಬಡ್ಡಿಯಷ್ಟಿದ್ದರೆ, ಸಾಲವನ್ನು ಪೂರ್ಣ ಮರುಪಾವತಿಸಲಾಗಿದೆ ಯೆಂದು ತಿಳಿಯತಕ್ಕದ್ದು. ಅಂತಹ ಸಮಯದಲ್ಲಿ ಬಡ್ಡಿ ವಿಧಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಮಾರುಕಟ್ಟೆ ಬೆಲೆಯ ಮೌಲ್ಯವು ಸಾಕಷ್ಟಿಲ್ಲದಿದ್ದರೆ, ಅದನ್ನು ಮೊದಲು ಬಾಕಿಯಿರುವ ಬಡ್ಡಿಗೆ ನಂತರ ಸಾಲದ ಅಸಲಿಗೆ ಜಮಾ ಮಾಡಬೇಕು. ಬಾಕಿ ಉಳಿದಿರುವ ಸುಸ್ತಿ ಸಾಲಕ್ಕೆ ಬಡ್ಡಿಯನ್ನು ವಿಧಿಸಬೇಕು.

**04. ಮಾರಾಟವಾಗದ ಸ್ಥಿರಾಸ್ತಿಯ ಮೊತ್ತವನ್ನು ಸಾಲಕ್ಕೆ ಜಮಾ ತೆಗೆದುಕೊಂಡ ನಂತರ ಸಾಲ ಬಾಕಿ ಉಳಿದಲ್ಲಿ ಮುಂದೆ ಉಳಿದ ಸಾಲವನ್ನು ಹೇಗೆ ಸಂದಾಯ ಮಾಡಿಕೊಳ್ಳಬೇಕು?**

**ಉತ್ತರ :** ಮಾರಾಟವಾಗದ ಸ್ಥಿರಾಸ್ತಿಯ ಮೊತ್ತವನ್ನು ಸಾಲಕ್ಕೆ ಜಮಾ ಮಾಡಿಕೊಂಡ ನಂತರ ಸಾಲ ಬಾಕಿ ಉಳಿದಲ್ಲಿ ಸಾಲಗಾರ ಅಥವಾ ಜಾಮೀನುದಾರರ ಹೆಸರಿನಲ್ಲಿರುವ ಆಸ್ತಿಯನ್ನು ಗುರುತಿಸಿ, ವಶಪಡಿಸಿಕೊಂಡು ಲಿಲಾವು ಹಾಕಬಹುದು.

**05. ಹೀಗೆ ಬ್ಯಾಂಕಿನ ಹೆಸರಿಗೆ ವರ್ಗಾವಣೆ ಮಾಡಿಕೊಂಡ ಸ್ಥಿರಾಸ್ತಿಯನ್ನು ಬ್ಯಾಂಕು ಎಷ್ಟು ಅವಧಿಯವರೆಗೆ ಬ್ಯಾಂಕಿನ ಹೆಸರಿನಲ್ಲಿ ಇಟ್ಟುಕೊಳ್ಳಬೇಕು?**

**ಉತ್ತರ :** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 9ರ ಪ್ರಕಾರ ಪಟ್ಟಣ ಸಹಕಾರ ಬ್ಯಾಂಕುಗಳು ಬ್ಯಾಂಕಿಂಗ್‌ಗೆ ಸಂಬಂಧಪಡದ ಆಸ್ತಿಯನ್ನು ಗರಿಷ್ಠ 7 ವರ್ಷಗಳವರೆಗೆ ತನ್ನ ಅಢಾವೆ ಪತ್ರದಲ್ಲಿ ಉಳಿಸಿಕೊಳ್ಳಬಹುದು. ಸ್ವಾಧೀನಪಡೆದುಕೊಂಡ ದಿನಾಂಕದಿಂದ 7 ವರ್ಷಗಳ ನಂತರ ಆಸ್ತಿಯನ್ನು ಉಳಿಸಿಕೊಳ್ಳಲು ಬ್ಯಾಂಕು ರಿಜರ್ವ್ ಬ್ಯಾಂಕಿನ ಅನುಮತಿಯನ್ನು ಪಡೆಯಬೇಕು. ಈ ಮಧ್ಯೆ, ಅಂತಹ ಆಸ್ತಿಯನ್ನು ಬ್ಯಾಂಕಿನ ಉಪಯೋಗಕ್ಕಾಗಿಯೂ ಬಳಸಿಕೊಳ್ಳಬಹುದು. ಅಂತಹ ಸಂದರ್ಭದಲ್ಲಿ ಕಟ್ಟಡ ನಿಧಿಯಲ್ಲಿ ಆಸ್ತಿಗೆ ಬೇಕಾಗುವ ಮೊತ್ತ ಇದೆಯೇಯೆಂದು ಖಾತರಿ ಪಡಿಸಬೇಕು; ಮೊತ್ತ ಕಡಿಮೆ ಇದ್ದಲ್ಲಿ ರಿಜಿಸ್ಟ್ರಾರರ ಅನುಮತಿ ಪಡೆಯಬೇಕು.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಯುದ್ಧ ಪೀಡಿತ ಉಕ್ರೇನ್‌ನ ಸುಮಿ ನಗರದಲ್ಲಿ ಸುಮಾರು 700ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಸಿಲುಕಿದ್ದಾರೆ. ಅನ್ನ ಆಹಾರವಿಲ್ಲದೆ ಸಂಕಷ್ಟಕ್ಕೆ ಪರದಾಡುತ್ತಿರುವ ಇವರಿಗೆ, ಈಗ ನೀರಿನ ಸರಬರಾಜು ಬಂದ್ ಆಗಿದ್ದು ಕುಡಿಯುವ ನೀರಿಗಾಗಿ ಹಿಮವನ್ನು ಕರಗಿಸುತ್ತಿದ್ದಾರೆ.
- ರಷ್ಯಾ-ಉಕ್ರೇನ್ ನಡುವೆ ಸೇನಾಪಡೆ ಯುದ್ಧಕ್ಕೆ ತಾರ್ಕಿಕ ಅಂತ್ಯ ಕಾಣುವ ಲಕ್ಷಣ ಗೋಚರಿಸುತ್ತಿದೆ. ರಷ್ಯಾ ಉಕ್ರೇನ್ ಮೇಲೆ ತಾತ್ಕಾಲಿಕ ಕದನ ವಿರಾಮ ಘೋಷಣೆ ಮಾಡಿದೆ.
- ಮಂಗಳೂರಿನ 64 ವರ್ಷದ ಮಹಿಳಾ ಕ್ರೀಡಾಪಟು ಭವಾನಿ ಜೋಗಿ ಇತ್ತೀಚೆಗೆ ಶ್ರೀಲಂಕಾದಲ್ಲಿ ನಡೆದ 35ನೇ ವಾರ್ಷಿಕ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್ ಶಿಪ್‌ನಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆಲ್ಲುವುದರೊಂದಿಗೆ ದೇಶಕ್ಕೆ ಕೀರ್ತಿ ತಂದಿದ್ದಾರೆ.
- ಗುಂಡ್ಲುಪೇಟೆ ತಾಲ್ಲೂಕಿನ ಮಡಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಗುಮ್ಮಕಲ್ಲು ಗುಡ್ಡಗಣಿಯಲ್ಲಿ ದುರಂತ ಸಂಭವಿಸಿದ್ದು, ಗಣಿಯಲ್ಲಿ 10 ಮಂದಿ ಕಂಪ್ರೆಸರ್ ಕಾರ್ಮಿಕರು, 5 ಟಿಪ್ಪರ್ 4 ಹಿಟಾಚಿ ವಾಹನಗಳಿದ್ದವು.
- ಉತ್ತರ ಪ್ರದೇಶದ ದೌರಾಲಾ ನಿಲ್ದಾಣದ ಬಳಿ ಸಹರಾನ್‌ಪುರದಿಂದ ದೆಹಲಿಗೆ ತೆರಳುತ್ತಿದ್ದ ರೈಲಿನ ಎರಡು ಬೋಗಿಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಪ್ರಯಾಣಿಕರು ರೈಲ್ವೆ ಸಿಬ್ಬಂದಿಯೊಂದಿಗೆ ಕೈಜೋಡಿಸಿ ಹೊತ್ತಿ ಉರಿಯುತ್ತಿದ್ದ ಎಂಜಿನ್‌ನಿಂದ ಬೋಗಿಗಳನ್ನು ತ್ವರಿತವಾಗಿ ಎಳೆಯಲು ಸಹಾಯ ಮಾಡಿದ್ದಾರೆ.
- ಉತ್ತರ ಕೊರಿಯಾ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಕೊರಿಯನ್ ಪರ್ಯಾಯ ದ್ವೀಪದ ಪೂರ್ವದಲ್ಲಿ ಸಮುದ್ರದತ್ತ ಹಾರಿಸಿದೆ. ಈ ಬ್ಯಾಲಿಸ್ಟಿಕ್ ಕ್ಷಿಪಣಿಯ ಪರೀಕ್ಷಾರ್ಥ ಪರೀಕ್ಷೆಯನ್ನು ಪತ್ತೆ ಹಚ್ಚಿರುವುದಾಗಿ ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ತಿಳಿಸಿದ್ದಾರೆ..
- ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 15 ವರ್ಷಗಳ ಕಾಲ ವಿಜೃಂಭಿಸಿ, ಟೆಸ್ಟ್ ಕ್ರಿಕೆಟ್‌ನಲ್ಲಿ 708 ವಿಕೆಟ್‌ಗಳನ್ನು ಗಳಿಸಿರುವ ಆಸ್ಟ್ರೇಲಿಯಾದ ಕ್ರಿಕೆಟ್ ದಿಗ್ಗಜ ಶೇನ್ ವಾರ್ನ್ (52) ಥಾಯ್ ಹಾಲಿಡೇ ಐಲ್ಯಾಂಡ್ ಬಂಗಲೆಯಲ್ಲಿ ಹೃದಯಘಾತದಿಂದ ನಿಧನರಾಗಿದ್ದಾರೆ.

## ಓದುಗರ ಅನಿಸಿಕೆ . . .



**ಆರ್‌ಬಿಐ ಕ್ರಮ ಸ್ವಾಗತಾರ್ಹವಾಗಿದೆ :** ಹಣದ ಅಗತ್ಯವಿರುವವರಿಗೆ ಸುಲಭವಾಗಿ ಸಾಲ ನೀಡುವ, ಮೊದಲು ಆಮಿಷಗಳನ್ನು ಒಡ್ಡಿ ಆ ನಂತರ ಭಾರಿ ಬಡ್ಡಿ ದರಗಳನ್ನು ವಿಧಿಸುವ ಹಾಗೂ ಸಾಲದ ವಸೂಲಾತಿ ವಿಚಾರದಲ್ಲಿ ಕಿರುಕುಳ ನೀಡುವ ಮೊಬೈಲ್ ಆ್ಯಪ್ ಆಧಾರಿತ ಒಂದೆರಡು ಸಂಸ್ಥೆಗಳನ್ನು ಆರ್‌ಬಿಐ ನಿಷೇಧಿಸಿರುವುದು ಸ್ವಾಗತಾರ್ಹವಾಗಿದೆ. ಆ ಮೂಲಕ ಮೊಬೈಲ್ ಅಪ್ಲಿಕೇಶನ್ ಆಧಾರಿತ ಸಾಲ ನೀಡಲು ತೊಡಗಿಸಿಕೊಂಡಿರುವ ಉಳಿದ ಸಂಸ್ಥೆಗಳಿಗೆ ಕಠಿಣ ಕ್ರಮದ ಸಂದೇಶವನ್ನು ರವಾನಿಸಿದೆ.

**ವಿನಾಯಕ ಬಾಳಿಗ, ಮಂಗಳೂರು**

**ಮಾಹಿತಿ ಪೂರ್ಣ ಲೇಖನ :** ಗೃಹ ಸಾಲ ಪಡೆದವರು ನಿಧನರಾದರೆ, ಅವರ ಕುಟುಂಬದವರು ಅನುಭವಿಸುವ ನೋವು ಯಾರಿಗೂ ಅರ್ಥವಾಗುವಂತಹದಲ್ಲ. ಅವರಿಗೆ ಗೃಹ ಸಾಲ ತೀರಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವವರು ಇರುವುದಿಲ್ಲ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಲೇಖನ ಈ ಕುರಿತು ಸೂಕ್ತ ಮಾಹಿತಿಯನ್ನು ನೀಡಿತು, ಮುಂದಿನ ಸಂಚಿಕೆಗಳಲ್ಲಿ ಈ ಬಗೆಯ ಮಾಹಿತಿ ಪೂರ್ಣ ಲೇಖನಗಳು ಹೆಚ್ಚು ಪ್ರಕಟವಾಗಲಿ.

**ಎನ್.ವಿ. ಸಂದರೇಶ್, ತಿಪಟೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.